**ಕರ್ನಾಟಕ ವಿಧಾನ ಪರಿಷತ್ತು**

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 759 |
| ಮಾನ್ಯ ಸದಸ್ಯರ ಹೆಸರು | ಶ್ರೀ ಆಯನೂರ್ ಮಂಜುನಾಥ್(ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 19.09.2022 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು |

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ವೈದ್ಯಕೀಯ ಶಿಕ್ಷಣ ಇಲಾಖೆಯಡಿ ಸ್ವಾಯತ್ತ ವೈದ್ಯಕೀಯ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಿಗೆ OPS/NPS ಯಾವ ದಿನಾಂಕದಿಂದ ನೀಡಲಾಗುತ್ತಿದೆ;(ವಿವರ ಒದಗಿಸುವುದು) | ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ವೈದ್ಯಕೀಯ ಕಾಲೇಜುಗಳು ಹಾಗೂ ದಂತ ಕಾಲೇಜುಗಳು & ಇದಕ್ಕೆ ಹೊಂದಿಕೊಂಡಿರುವ ಬೋಧಕ ಆಸ್ಪತ್ರೆಗಳು ಹಾಗೂ ಸೂಪರ್ ಸ್ಪೇಷಾಲಿಟಿ ಆಸ್ಪತ್ರೆಗಳಲ್ಲಿ ದಿನಾಂಕ:1/4/2006ರ ನಂತರ ಖಾಯಂ ಆಗಿ ನೇಮಕಗೊಂಡು ಕಾರ್ಯನಿರ್ವಹಿಸುತ್ತಿರುವ ಬೋಧಕ & ಬೋಧಕೇತರ ವೃಂದದ ಅಧಿಕಾರಿ & ಸಿಬ್ಬಂದಿಗಳಿಗೆ ಸರ್ಕಾರದ ಆದೇಶ ಸಂಖ್ಯೆ:ಆಕುಕ 59 ಎಂಎಸ್‌ಎಫ್ 2017, ದಿನಾಂಕ:27.08.2020 ಹಾಗೂ ಆದೇಶ ಸಂ:ಆಕುಕ 59 ಎಂಎಸ್‌ಎಫ್ 2017,ದಿ:8/2/2022ರನ್ವಯ NPS ಅನ್ನು ಆದೇಶ ಹೊರಡಿಸಿದ ದಿನಾಂಕಗಳಿಂದ ಜಾರಿಗೆ ಬರುವಂತೆ ಆದೇಶಿಸಿದೆ. |
| ಆ) | ಸದರಿ ಸಿಬ್ಬಂದಿಗಳಿಗೆ ಸರ್ಕಾರಿ ಸೇವೆಗೆ ಸೇರಿದ ದಿನಾಂಕದಿಂದ OPS/NPS ಅಳವಡಿಸದಿರಲು ಕಾರಣಗಳೇನು; | ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಡುವ ಸಂಸ್ಥೆಗಳು ಸ್ವಾಯತ್ತ ಸ್ಥಾನಮಾನದೊಂದಿಗೆ 2006-07ನೇ ಸಾಲಿನಿಂದ ಪ್ರಾರಂಭವಾಗಿರುತ್ತವೆ. |
| ಇ) | ವೈದ್ಯಕೀಯ ಶಿಕ್ಷಣ ಇಲಾಖೆಯ ಅಡಿಯಲ್ಲಿ 01.06.2006ರ ನಂತರ ನೇಮಕಾತಿಗೊಂಡು 27.08.2020ರ ಅಂತರದಲ್ಲಿ ಸೇವೆಯಿಂದ ನಿವೃತ್ತಗೊಂಡ ಸಿಬ್ಬಂದಿಗಳಿಗೆ ಯಾವ ರೀತಿಯಲ್ಲಿ ನಿವೃತ್ತಿ ವೇತನ ನೀಡಲಾಗುತ್ತಿದೆ;(ಮಾಹಿತಿ ಒದಗಿಸುವುದು) | ಸ್ವಾಯತ್ತ ಸಂಸ್ಥೆಗಳಲ್ಲಿ ದಿನಾಂಕ: 27/8/2020ರಿಂದ ಅನ್ವಯಿಸುವಂತೆ NPS ಅಳವಡಿಸಿಕೊಂಡಿದ್ದು, ದಿನಾಂಕ: 1/4/2006ರಿಂದ ದಿನಾಂಕ:27/8/2020ರ ಅವಧಿಯಲ್ಲಿ ಹೊಸ ಅಂಶದಾಯಿ ಪಿಂಚಣಿ ಯೋಜನೆಗೆ ಸಂಬಂಧಿಸಿದಂತೆ ಯಾವುದೇ ನೌಕರರನ ವಂತಿಗೆಯನ್ನು ಕಟಾವಣೆ ಮಾಡಿರುವುದಿಲ್ಲ.<br>ಸರ್ಕಾರದ ಸುತ್ತೋಲೆ ಸಂ: ಆಇ (ಎಸ್‌ಪಿಎಲ್) 209 ಪಿಇಎನ್ 2012, ದಿ:21/2/2015 ರಲ್ಲಿ ಸ್ವಾಯತ್ತ ಸಂಸ್ಥೆಗಳು, ವಿಶ್ವವಿದ್ಯಾಲಯಗಳು, ನಿಗಮ ಮಂಡಳಿಗಳು, ಮಹಾನಗರ ಪಾಲಿಕೆಗಳು ಮುಂತಾದವುಗಳು ಎನ್ ಪಿ ಎಸ್ ಯೋಜನೆಯನ್ನು ಅಳವಡಿಸಿಕೊಳ್ಳಲು ಯಾವುದೇ ಸಂಪನ್ಮೂಲವನ್ನು ಒದಗಿಸುವುದಿಲ್ಲವೆಂದು, ಅವು ತಮ್ಮ ಸ್ವಂತ ಸಂಪನ್ಮೂಲದಿಂದಲೇ ಭರಿಸತಕ್ಕದೆಂದು ಸ್ಪಷ್ಟಪಡಿಸಲಾಗಿದೆ. ಅದರನ್ವಯ ವೈದ್ಯಕೀಯ ಶಿಕ್ಷಣ ಇಲಾಖೆ ವ್ಯಾಪ್ತಿಯ ಸ್ವಾಯತ್ತ ಸಂಸ್ಥೆಗಳಿಗೆ ಎನ್‌ಪಿಎಸ್ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರದಿಂದ ಅನುದಾನವನ್ನು ಒದಗಿಸಲು ನಿಯಮಗಳಡಿ ಅವಕಾಶವಿರುವುದಿಲ್ಲ. ಸದರಿಯವರಿಗೆ ನಿವೃತ್ತಿ ಉಪದಾನ ಹಾಗೂ ಗಳಿಕೆ ರಜೆ ನಗದೀಕರಣ ಸೌಲಭ್ಯಗಳನ್ನು ನೀಡಲಾಗುತ್ತಿದೆ. |
| ಈ) | ವೈದ್ಯಕೀಯ ಶಿಕ್ಷಣ ಇಲಾಖೆಯ ಅಡಿಯಲ್ಲಿ 01.06.2006ರ ನಂತರ ನೇಮಕಾತಿಗೊಂಡು 27.08.2020ರ ನಂತರದ 3-4 ವರ್ಷಗಳಲ್ಲಿ ಸೇವೆಯಿಂದ ನಿವೃತ್ತಿಗೊಂಡ ಸಿಬ್ಬಂದಿಗಳಿಗೆ OPS/NPS ನೀಡಿದಲ್ಲಿ ತುಂಬಾ ಕನಿಷ್ಠ ನಿವೃತ್ತಿ ವೇತನ ಸಿಗುವುದರಿಂದ ಅಂತಹ ಸಿಬ್ಬಂದಿಗಳಿಗೆ ಜೀವನ ನಿರ್ವಹಣೆಗಾಗಿ ಯಾವ ಕ್ರಮ ಕೈಗೊಳ್ಳಲಾಗಿದೆ? | |

ಸಂಖ್ಯೆ: ಎಂಇಡಿ 424 ಎಂಪಿಎಸ್ 2022

(ಡಾ|| ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು